ಮುರಲೀಧರ ಕುಲಕರ್ಣಿ, ಬೀದರ

ಹೆಚ್ಚು ಹಣ ಕೊಟ್ಟು ಹರಿದ ಜೀನ್ಸ್ ಧರಿಸುವ ನಮ್ಮ ಯುವಜನಾಂಗ ಬುದ್ಧಿವಂತರೇ?



ಜೀನ್ಸ್ ದಪ್ಪ; ಸೆಕೆ ಜಾಸ್ತಿ; ತತ್ಕಾರಣ 'ಸ್ವಾಟ್ ಕಿಟಕಿ'ಗಳು, ಎಂದನಾ ಜಾಣ.

ಮಲ್ಲಿಕಾರ್ಜುನ, ಸುರಧೇನುಪುರ

ಸರ್ಕಾರಿ ಕೆಲಸ ಯಾವ ದೇವರ ಕೆಲಸ?

ಬೆದರಿಸಿ ನೈವೇದ್ಯ ವಸೂಲಿ ಮಾಡುವ ಯಾವುದೋ ಕ್ಷುದ್ರದೇವತೆಯದೇ.

ಕಾಳೀಹುಂಡಿ ಶಿವಕುಮಾರ್, ಮೈಸೂರು

'ನೀ ಎಲ್ಲಿ ನಡೆವೆ ದೂರ ಎಲ್ಲೆಲ್ಲು ಶೋಕವೇ' ಎಂದು ನನ್ನ ಗೆಳೆಯ ಹಾಡುತ್ತಾನಲ್ಲ...?

ಸ್ವಲ್ಪ ದಿನ ಟೀವಿ ಆಫ್ ಮಾಡಿಸಿ. ಅತಿ ಸೀರಿಯಲ್ ವೀಕ್ಷಣಾ ಪ್ರಭಾವವಿದು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಸಾಗರದಷ್ಟು ಕಷ್ಟಗಳ ನಡುವೆಯೂ ಜೀವನ ಸಾಗಿಸಲು ಸಾಧ್ಯವೆ?



ನಗೆಯ ತೆಪ್ಪದಲ್ಲಿ ಸಾಗಿ. ಕಷ್ಟಗಳು ತೆಪ್ಪಗಾಗುತ್ತವೆ.

ಫಾಲನೇತ್ರ ಸಜ್ಜನ, ಶಿರಸಿ

ಈಗ ವಾಲ್ಮೀಕಿ ರಾಮಾಯಣದ ಯಾವ ಕಾಂಡ ನಡೆಯುತ್ತಿದೆ?

ವಾಲ್ಮೀಕಿ ನಿಗಮದಲ್ಲಿ ಯುದ್ಧಕಾಂಡ, ನಗರಗಳಲ್ಲಿ ಕಿಷ್ಕಿಂಧಾ ಕಾಂಡ, ಅಯೋಧ್ಯೆಯಲ್ಲಿ ಬಾಲಕಾಂಡ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಕಾಲಪ್ರಜ್ಞೆ ಇಲ್ಲದ ಮನುಷ್ಯನು ಈ ಭೂಮಿಯಲ್ಲಿ ಬದುಕಲು ಸಾಧ್ಯವೆ?

ಬದುಕಲಷ್ಟೇ ಅಲ್ಲ, ಮಂತ್ರಿಯಾಗಲೂ ಸಾಧ್ಯ.

ರಾಘವೇಂದ್ರ, ಮೈಸೂರು

ಭ್ರಷ್ಟನ ಆಪ್ತರಿಗೂ, ಕೊಲೆಗಾರನ ಆಪ್ತರಿಗೂ ಏನು ವ್ಯತ್ಯಾಸ?

ಕೊಲೆಗಾರನ ಆಪ್ತರು 'ನೀನು ಮಾಡಿದ್ದರಲ್ಲಿ ನಮ್ಮದೂ ಪಾಲಿರಲಿ' ಎನ್ನುವುದಿಲ್ಲ.

ಎನ್.ಸಿ. ಸುಬ್ಬರಾವ್, ದಾವಣಗೆರೆ

ಅತ್ತೆಯು ಸೊಸೆಯನ್ನು ಗದರುವಂತೆ ಮಾವ ಯಾಕೆ ಗದರುವುದಿಲ್ಲ?

ಸಂಸಾರದ ಸಂಪೂರ್ಣ ಗದರುಗುತ್ತಿಗೆ ಅತ್ತೆಯದೇ ಆದ್ದರಿಂದ.

ಪೆಮ್ಮಳ್ಳಿ ಚಿಕ್ಕಣ್ಣ, ಪಾವಗಡ

ಮಡದಿ ರೇಗಿಸಿದಾಗ ಏನು ಮಾಡಬೇಕು?

ಮಕ್ಕಳ/ಸಾಕುನಾಯಿಯ/ಬೀದಿನಾಯಿಯ ಮೇಲೆ ರೇಗುವುದೇ ಪರಿಹಾರ.

ಭಾರತೀ ಗಂಗಾಧರ್, ಬೆಂಗಳೂರು

ಹಲವು ಸಂದರ್ಭಗಳಲ್ಲಿ ನಮಗೆ ನಾವೇ ಶತ್ರುಗಳಾಗಿರುತ್ತೇವೆ. ನಮ್ಮನ್ನು ಗೆಲ್ಲುವ ಬಗೆ ಹೇಗೆ?

ನಮ್ಮೊಳಗಿಂದ ನಾವು ಹೊರ ನಿಂತು ಆತ್ಮವಿಮರ್ಶೆ ಮಾಡಿಕೊಳ್ಳುವ ಮೂಲಕ..

ಗಣೇಶ ಎಂ. ಪೈ, ಬೆಂಗಳೂರು

ನನ್ನ ಸತಿಯು ನಾನು ಸನಿಹವಿರುವಾಗ ಜೋರಾಗಿ, ದೂರವಿರುವಾಗ ಮೆಲ್ಲಗೆ ಮಾತನಾಡುತ್ತಾಳಲ್ಲ?

ಓಹ್! ಆಪ್ತ ನೌಕರನನ್ನು ತೀರ ಹತ್ತಿರ ಬಿಟ್ಟುಕೊಳ್ಳದೆ, ದೂರವೂ ಮಾಡಿಕೊಳ್ಳದ ಜಾಣೆ ಆಕೆ.

ವಿಜಯ್ ಹೆಮ್ಮಿಗೆ, ಮೈಸೂರು

'ಪಿತೃಪಕ್ಷ' ಇರುವಂತೆ 'ಮಾತೃಪಕ್ಷ' ಎಂದೇಕೆ ಇರುವುದಿಲ್ಲ?

ಇವೆಯಲ್ಲ. ಇಂದಿರಾ, ಮಮತಾ, ಜಯಲಲಿತಾ ನಡೆಸಿದ್ದು ಮಾತೃಪಕ್ಷಗಳೇ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ

ದೇವರಿಗೆ ಬಸ್ಕಿ ಹೊಡೆಯುವುದೇಕೆ?

ನರಕಕ್ಕೆ ಪುಲಪ್ ಮಾಡಿ ಬೆಂಚ್ ಪ್ರೆಸ್ ಮಾಡದಿರಲೆಂದು.

## ಬಹುಮಾನಿತ ಪ್ರಶ್ನೆ

ಬಿ.ಆರ್. ಉಷಾ, ಕೆನಡಾ

ಪತಿ ಸತ್ತರೆ ಸತಿ ಸಹಗಮನ. ಸತಿ ಸತ್ತರೆ?

ಪತಿಯದು ಬ್ಯೂಟಿಗಳ ಕಡೆ ಗಮನ.

ರವೀಂದ್ರ ಕಾಸರ, ಶಿವಮೊಗ್ಗ

ರಾಜಕೀಯ ಸೇರಲು ಯಾವುದಾದರೂ ತರಬೇತಿ ಬೇಕಾ?

ಹೂಂ. ಹೆಚ್ಚಿನ ಮಾಹಿತಿಗಾಗಿ ಪರಪ್ಪನ ಅಗ್ರಹಾರವನ್ನು ಸಂಪರ್ಕಿಸಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ವಯಸ್ಸಾದವರಲ್ಲಿ ಆರೋಗ್ಯವಂತರಿಗಿಂತ ಅಸ್ವಸ್ಥರೇ ಹೆಚ್ಚಿರಲು ಕಾರಣವೇನು?

ವಯಸ್ಸಿನಲ್ಲಿ **Wise** ಆಗಿರದಿದ್ದುದು.

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕ

ಪರಂಗಿಗಳು ನಮ್ಮ ಜನಕ್ಕೆ ಬಿಟ್ಟುಹೋದದ್ದೇನು?

ಒಡೆದು ಆಳುವ, ಹೊಡೆದು ತಿನ್ನುವ ಬುದ್ಧಿಯನ್ನು.

ಪಿ. ಜಯವಂತ ಪೈ, ಕುಂದಾಪುರ

ಅರಸನಿಗೂ, ಅಗಸನಿಗೂ ವ್ಯತ್ಯಾಸವೇನು?



ಅರಸನಿಗೆ ಅರಿವು ಮುಖ್ಯ, ಅಗಸನಿಗೆ ಅರಿವೆ ಮುಖ್ಯ.

ಪಿ.ಜೆ. ರಾಘವೇಂದ್ರ, ಮೈಸೂರು

ಇಲ್ಲೊಬ್ಬರು ತಮ್ಮ ಮನೆಗೆ ನಿವೇಶನ ಅಂತ ಹೆಸರಿಟ್ಟಿದ್ದಾರಲ್ಲಾ?

ಕಳಪೆ ಕಟ್ಟಡ ಕಾಮಗಾರಿಯಂತೆ. ಇಂದೋ ನಾಳೆಯೋ ಉಳಿಯುವುದು ನಿವೇಶನವೇ.

ರಮೇಶ ಬಿ., ಬೈಲಹೊಂಗಲ

ಈ ಜಗತ್ತಿನಲ್ಲಿ ಶಾಶ್ವತವಾದದ್ದು ಯಾವುದು ಸರ್?

'ಮುಂದೇನು?' ಎಂಬ ಪ್ರಶ್ನೆ.

■ ರಾಮ್